# ಅಕ್ಕಮ್ಮನವರ ವಚನಗಳಲ್ಲಿ ತಾತ್ವಿಕ ಮತ್ತು ವೈಜ್ಞಾನಿಕ ಪ್ರಜ್ಞೆ: ಒಂದು ವಿಮರ್ಶಾತ್ಮಕ ನೋಟ

**ಮಮತ ಬಿ.ಆರ್.*** & **ಜ್ಯೋತಿಶಂಕರ್****

**DOI: https://doi.org/10.5281/zenodo.21793743**

**ABSTRACT**

12ನೇ ಶತಮಾನದ ಬಸವಯುಗದ ಪ್ರಮುಖ ವಚನಕಾರ್ತಿ ಅಕ್ಕಮ್ಮನವರ ವಚನಗಳು ಕೇವಲ ಭಕ್ತಿಯ ಅಭಿವ್ಯಕ್ತಿಯಾಗಿರದೆ, ಅಪರೂಪದ ತಾತ್ವಿಕ ಹಾಗೂ ವೈಜ್ಞಾನಿಕ ಪ್ರಜ್ಞೆಯನ್ನು ಮೈಗೂಡಿಸಿಕೊಂಡಿವೆ. ವ್ರತ, ನೇಮ, ಶೀಲ ಮತ್ತು ಕಾಯಕ ತತ್ವಗಳ ಮೂಲಕ ಆಚಾರ-ವಿಚಾರಗಳ ಸಮನ್ವಯವನ್ನು ಈ ವಚನಗಳು ಎತ್ತಿಹಿಡಿಯುತ್ತವೆ. ಅಂತರಂಗ ಮತ್ತು ಬಹಿರಂಗದ ಶುದ್ಧಿಗೆ ಒತ್ತು ನೀಡುತ್ತಾ, ಇಂದ್ರಿಯ ನಿಗ್ರಹದ ಮೂಲಕ ಅತ್ಯುನ್ನತ ನೈತಿಕ ಮೌಲ್ಯಗಳನ್ನು ಅವರು ಬೋಧಿಸಿದ್ದಾರೆ. ಮಾದಕ ವಸ್ತುಗಳು ಮತ್ತು ತಾಮಸ ಆಹಾರಗಳು (ಬೆಳ್ಳುಳ್ಳಿ, ಈರುಳ್ಳಿ) ಮಾನವನ ನರಮಂಡಲದ ಮೇಲುಂಟುಮಾಡುವ ದುಷ್ಪರಿಣಾಮಗಳ ವಿಶ್ಲೇಷಣೆ ಹಾಗೂ ಹತ್ತಿರದ ರಕ್ತಸಂಬಂಧಿಗಳ ನಡುವಿನ ವಿವಾಹದಿಂದ ಎದುರಾಗುವ ಅನುವಂಶಿಕ ದೋಷಗಳ ಬಗೆಗಿನ ಎಚ್ಚರಿಕೆಗಳು ಅವರ ವೈಜ್ಞಾನಿಕ ದೂರದೃಷ್ಟಿಗೆ ಸಾಕ್ಷಿಯಾಗಿವೆ. ಮೂಢನಂಬಿಕೆಗಳನ್ನು ಧಿಕ್ಕರಿಸಿ, ಅರಿವು ಮತ್ತು ಸತ್ಯಶೋಧನೆಯತ್ತ ಸಾಗುವ ಅವರ ಒಳನೋಟಗಳು ಮಾನವನ ದೈಹಿಕ ಮತ್ತು ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಇಂದಿಗೂ ಪ್ರಸ್ತುತವಾಗಿವೆ.

**KEYWORDS:** ಅಕ್ಕಮ್ಮನವರ ವಚನಗಳು, ತಾತ್ವಿಕ ಪ್ರಜ್ಞೆ, ವೈಜ್ಞಾನಿಕ ಪ್ರಜ್ಞೆ, ವ್ರತಾಚಾರ, ಕಾಯಕ ತತ್ವ.

* **ಮಮತ ಬಿ.ಆರ್.**, ಸಂಶೋಧನಾರ್ಥಿ, ಕನ್ನಡ ವಿಭಾಗ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

** **ಡಾ. ಜ್ಯೋತಿಶಂಕರ್,** ಸಹ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

ವಚನ ಸಾಹಿತ್ಯ ಕನ್ನಡ ನಾಡು ನುಡಿ ಮತ್ತು ಸಾಹಿತ್ಯದ ಗರಿಮೆಯನ್ನು ವಿಶ್ವ ಮಟ್ಟಕ್ಕೆ ಕೊಂಡೊಯ್ದ ಸಾಹಿತ್ಯವಾಗಿದೆ. ಇದು 12ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದು ಸಾಹಿತ್ಯ ಲೋಕಕ್ಕೆ ಹೊಸ ಹಾದಿಯನ್ನು ತೋರಿಸಿಕೊಟ್ಟಿತು. ಈ ಅವಧಿಯಲ್ಲಿ ಅನೇಕ ಶರಣರು ತಮ್ಮ ಅನುಭಾವದ ಅಂತರಂಗದ ನುಡಿಗಳಿಗೆ ವಚನದ ರೂಪವನ್ನು ಕೊಟ್ಟರು. ಮಹಿಳೆಯರು ಕೂಡ ಸಾಹಿತ್ಯ ಲೋಕದಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡು ವಚನಕಾರ್ತಿಯರಾದರು. ಅವರಲ್ಲಿ ಅಕ್ಕಮಹಾದೇವಿ, ಮುಕ್ತಾಯಕ್ಕ, ನೀಲಾಂಬಿಕೆ, ಗಂಗಾಂಬಿಕೆ, ಅಕ್ಕ ನಾಗಮ್ಮ, ಹಡಪದ ಲಿಂಗಮ್ಮ ಮುಂತಾದವರು ಕಂಡುಬರುತ್ತಾರೆ. ಇವರಲ್ಲಿ ಶಿವಶರಣೆ ಅಕ್ಕಮ್ಮನವರು ಪ್ರಮುಖ ವಚನಕಾರ್ತಿಯಾಗಿ ಕಂಡುಬರುತ್ತಾರೆ.

ಅಕ್ಕಮ್ಮನವರು ಬಸವಯುಗದ ಪ್ರಮುಖ ವಚನಕಾರ್ತಿಯಾಗಿದ್ದು ಇವರ 155 ವಚನಗಳು ಪ್ರಸ್ತುತ ಲಭ್ಯವಾಗಿವೆ. ಅತಿ ಹೆಚ್ಚು ವಚನಗಳನ್ನು ರಚಿಸಿದ ವಚನಕಾರ್ತಿಯರ ಪಟ್ಟಿಯಲ್ಲಿ ಇವರ ಹೆಸರು ಸಹ ಕಂಡುಬರುತ್ತದೆ. 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ' ಎನ್ನುವುದು ಇವರ ವಚನಾಂಕಿತವಾಗಿದೆ. ಇವರ ಜೀವನ ವಿಚಾರ–ಇತಿವೃತ್ತ ಕುರಿತು ಇನ್ನೂ ಸಂಶೋಧನೆಯಾಗಬೇಕಿದೆ. ಇವರ ವಚನಗಳು ಕನ್ನಡ ಸಾಹಿತ್ಯ ಲೋಕದಲ್ಲಿ ಕೇವಲ ಭಕ್ತಿಯ ಅಭಿವ್ಯಕ್ತಿಯಾಗಿ ಮಾತ್ರ ಉಳಿಯದೆ ವಿಶಿಷ್ಟವಾದ ವಿಭಿನ್ನ ನೆಲೆಗಳನ್ನು ಒಳಗೊಂಡಿವೆ. ಅವುಗಳಲ್ಲಿ ತಾತ್ವಿಕ ಮತ್ತು ವೈಜ್ಞಾನಿಕ ಪ್ರಜ್ಞೆಯನ್ನು ಬಿಂಬಿಸುವ ಅಂಶಗಳನ್ನು ಇಲ್ಲಿ ಅವಲೋಕಿಸಲಾಗಿದೆ.

**ತಾತ್ವಿಕ ಪ್ರಜ್ಞೆ:**

ಅಕ್ಕಮ್ಮನವರ ವಚನಗಳ ಮುಖ್ಯ ಕೇಂದ್ರಬಿಂದು ವ್ರತ–ನೇಮ–ಶೀಲ ಎಂಬ ತಾತ್ವಿಕ ಅನುಸಂಧಾನವಾಗಿದೆ. ತಾತ್ವಿಕ ಲೋಕದಲ್ಲಿ ಜ್ಞಾನ ಮತ್ತು ಕ್ರಿಯೆಗಳ ನಡುವಿನ ಸಂಬಂಧದ ಬಗ್ಗೆ ದೊಡ್ಡ ಚರ್ಚೆ ಇದೆ. ವ್ರತಾಚಾರ–ಶೀಲ–ನೇಮ ಇವು ಜ್ಞಾನ ಮತ್ತು ಕ್ರಿಯೆಯನ್ನು ಜೋಡಿಸುವ ಕೊಂಡಿಗಳಾಗಿ ಇವರ ವಚನಗಳಲ್ಲಿ ಹಾಸುಹೊಕ್ಕಿವೆ. ಅಕ್ಕಮ್ಮನವರ ದೃಷ್ಟಿಯಲ್ಲಿ, ತಾವು ನಂಬಿದ ತಾರ್ಕಿಕ ಸತ್ಯವನ್ನು ದೈನಂದಿನ ಬದುಕಿನಲ್ಲಿ ನಡೆ–ನುಡಿಯ ಮೂಲಕ ಅಂದರೆ ಕ್ರಿಯೆಯ ಮೂಲಕ ಜಾರಿಗೆ ತರುವುದೇ ವ್ರತಾಚಾರವಾಗಿದೆ. ಅದಕ್ಕಾಗಿ ವಚನವೊಂದರಲ್ಲಿ "ಆಚಾರವೇ ವಸ್ತು, ವ್ರತವೇ ಪ್ರಾಣ, ಕ್ರಿಯೆಯೇ ಜ್ಞಾನ, ಜ್ಞಾನವೇ ಆಚಾರ"[1] ಎಂದು ತಿಳಿಸಿದ್ದಾರೆ. ಇವರ ವಚನಗಳು ಮಹೇಶ್ವರ ಸ್ಥಲಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿರುವ ಕಾರಣ ವೀರವ್ರತಿತನವು ಇವರ ವಚನಗಳಲ್ಲಿ ಎದ್ದು ಕಾಣುತ್ತದೆ.

ವ್ರತಾಚಾರಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿರುವ ಇವರು "ಇಂತೀ ಅಂತರಂಗದಲ್ಲಿ ವ್ರತ, ಬಹಿರಂಗದಲ್ಲಿ ಆಚಾರ, ಇಂತೀ ಉಭಯ ಸಿದ್ಧವಾಗಿ ನಡೆಯುವುದೇ ವ್ರತಾಚಾರ ನಡೆವುದೇ ವ್ರತ ಆಚಾರ"[2] ಎಂಬ ವಿಶಿಷ್ಟವಾದ ವ್ಯಾಖ್ಯಾನವನ್ನು ನೀಡಿದ್ದಾರೆ.

ಇವರ ಬಹುತೇಕ ವಚನಗಳು ವ್ರತಾಚಾರ ಕುರಿತ ವ್ಯಾಖ್ಯಾನಗಳನ್ನು ಒಳಗೊಂಡಿವೆ. ವ್ರತ ಎಂದರೇನು? ಎನ್ನುವುದಕ್ಕೆ ತಮ್ಮ ಹಲವು ವಚನಗಳ ಮೂಲಕ ಅರ್ಥವನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

**ವ್ರತವೆಂಬುದೇನು?**
**ಮನ ವಿಕಾರಿಸುವುದಕ್ಕೆ ಕಟ್ಟಿದ ಗೊತ್ತು.**
**ಜಗದ ಕಾಮಿಯಂತೆ ಕಾಮಿಸದೆ,**
**ಜಗದ ಕ್ರೋಧಿಯಂತೆ ಕ್ರೋಧಿಸದೆ,**
**ಜಗದ ಲೋಭಿಯಂತೆ ಲೋಭಿಸದೆ,**
**ಮಾಯಾಮೋಹಗಳು ವರ್ಜಿತವಾಗಿ**
**ಮನಬಂದಂತೆ ಆಡದೆ, ತನುಬಂದಂತೆ ಕೂಡದೆ**
**ವ್ರತದಂಗಕ್ಕೆ ಸಂಗವಾಗಿ ನಿಂದ ಸದ್ಭಕ್ತನ ಅಂಗವೇ**
**ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಂಗ.**[3]

ಇತ್ಯಾದಿಯಾಗಿ ವ್ರತಾಚಾರದ ಅರ್ಥವನ್ನು ತಾತ್ವಿಕ ನೆಲೆಯಲ್ಲಿ ಕಟ್ಟುವ ಪ್ರಯತ್ನವು ಇವರ ವಚನಗಳಲ್ಲಿವೆ. ಅರಿಷಡ್ವರ್ಗಗಳ ನಿಗ್ರಹ ಕುರಿತು ತಮ್ಮ ವಚನಗಳಲ್ಲಿ ಮಾತನಾಡಿದ್ದಾರೆ. ವ್ರತಾಚಾರವು ಕೇವಲ ಬಾಹ್ಯಾಡಂಬರದ ಆಚರಣೆಯಾಗಿರದೆ, ಅಂತರಂಗದ ಆಚರಣೆಯಾಗಿದೆ. ಪ್ರತಿಯೊಬ್ಬ ವ್ಯಕ್ತಿಯು ಸನ್ಮಾರ್ಗದಲ್ಲಿ ನಡೆಯಲು ಇರುವ ಮಾರ್ಗಸೂಚಿಯೇ ವ್ರತಾಚಾರ ಎನ್ನುವುದು ಅಕ್ಕಮ್ಮನವರ ವಚನಗಳ ಇಂಗಿತವಾಗಿದೆ. ಷಟ್ಸ್ಥಲಗಳಲ್ಲಿ ಮಹೇಶ್ವರ ಸ್ಥಲ ಹೆಚ್ಚಾಗಿ ಕಂಡುಬರುತ್ತದೆ. ಮಹೇಶ್ವರ ಸ್ಥಲದಲ್ಲಿ ಸಾಧಕನು ತನ್ನ ಇಂದ್ರಿಯ ಚಾಪಲ್ಯಗಳನ್ನು ಮೆಟ್ಟಿ ನಿಲ್ಲಬೇಕು. ಇಲ್ಲಿನ ಭಕ್ತಿ ಕೇವಲ ಭಾವನಾತ್ಮಕವಾಗಿರದೇ ಆಚಾರವೇ ಪ್ರಾಣ ಎನಿಸುವ ನೈತಿಕ ದೃಢತೆಯನ್ನು ಹೊಂದಿದೆ. ಇವರ ತಾತ್ವಿಕ ಪ್ರಜ್ಞೆಯು ವೈಚಾರಿಕ ಪ್ರಜ್ಞೆಯೊಂದಿಗೆ ಮೇಳೈಸಿ ಬಂದಿದೆ. ಅಂತರಂಗ ಮತ್ತು ಬಹಿರಂಗದ ಶುದ್ಧತೆಗೆ ಆದ್ಯತೆ ನೀಡಲಾಗಿದೆ. ಶೀಲದ ಸಾಕ್ಷಾತ್ಕಾರ ಇವರ ವಚನಗಳಲ್ಲಿ ನೆಲೆಗೊಂಡಿದೆ. ಶೀಲ ಎಂದರೆ ಕೇವಲ ಬಾಹ್ಯ ವೇಷಭೂಷಣ ಅಲ್ಲ. ಅದು ವಿಕಾರಗಳಿಂದ ಮುಕ್ತವಾದ ಮನಸ್ಸು ಎನ್ನುವುದಾಗಿದೆ. ಅಷ್ಟಾವರಣ ಮತ್ತು ಪಂಚಾಚಾರಗಳ ಸತ್ವವನ್ನು ಸಹ ತಮ್ಮ ವಚನಗಳಲ್ಲಿ ತಿಳಿಸಿದ್ದಾರೆ.

**ಪಂಚಾಚಾರ ಶುದ್ಧವಾದ ಸದ್ಭಕ್ತಂಗೆ,**
**ಪಾದತೀರ್ಥಪ್ರಸಾದದಲ್ಲಿ ನಿರತಂಗೆ,**
**ಆವ ವ್ರತ ನೇಮವ ನಡೆಸುವ ಸದ್ಭೈವಂಗೆ**
**ಆತನ ಸ್ವಕಾಯಕದ ಇರವೆಂತೆಂದಡೆ!**[4]

ಪಂಚಾಚಾರದಲ್ಲಿ ನಿರತನಾಗಿರುವ ಭಕ್ತನು ತನ್ನ ನಡೆ ನುಡಿಗಳಲ್ಲಿ, ತನ್ನ ಕಾಯಕದಲ್ಲಿ ಶ್ರೇಷ್ಠತೆಯನ್ನು ಗಳಿಸುತ್ತಾನೆ. ಆತನು ಅಷ್ಟಾವರಣಗಳ ಮಹತ್ವ ಅರಿತವನು ಪರಮಾತ್ಮನಿಗೆ ಹತ್ತಿರನಾಗಿರುತ್ತಾನೆ ಎನ್ನುವುದು ಅಕ್ಕಮ್ಮನವರ ಅಭಿಪ್ರಾಯವಾಗಿದೆ. ಈ ವಚನದಲ್ಲಿನ "ತಾ ದೃಷ್ಟದಲ್ಲಿ ಕಾಬ ಪ್ರಾಣಿಗಳ ಕೊಲ್ಲದೆ,

ಕೊಲ್ಲುವುದಕ್ಕೆ ಒಡಂಬಡದೆ,'' ಎಂಬ ಸಾಲು ಅಹಿಂಸೆಯ ಮಹತ್ವವನ್ನು ತಿಳಿಸುತ್ತದೆ.

ಕಾಯಕ ತತ್ವಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿರುವ ಇವರು ಕಾಯಕವೇ ಕೈಲಾಸ ಎಂಬ ತತ್ವದ ವ್ಯಾಪ್ತಿಗೆ ವಿಸ್ತಾರವನ್ನು ತಂದಿದ್ದಾರೆ. ಇವರ ವಚನಗಳಲ್ಲಿ ಕಾಯಕ ಎನ್ನುವುದು ಕೇವಲ ಉದರ ನಿಮಿತ್ತದ ಶ್ರಮವಲ್ಲ. ಅದು ತನು ಮನಗಳನ್ನು ಕರಗಿಸುವ ಕಠಿಣ ತಪಸ್ಸು. ಇಂತಹ ಕಾಯಕದಿಂದ ಬಂದದ್ದೇ ನಿಜವಾದ ಪ್ರಸಾದವಾಗಿದೆ. ಅಕ್ಕಮ್ಮನವರ ದೃಷ್ಟಿಯಲ್ಲಿ ಭಕ್ತನ ಅಂಗಳವೇ ಅವಿಮುಕ್ತ ಕ್ಷೇತ್ರವಾಗಿದೆ. ಅಂದಿನ ಕಾಲದಲ್ಲಿದ್ದ ವಿವಿಧ ಕಾಯಕಗಳ ಪ್ರಸ್ತಾವನೆಯನ್ನು ಇವರ ವಚನಗಳಲ್ಲಿ ಮಾಡಲಾಗಿದೆ. ಪ್ರತಿ ಕಾಯಕಗಳು ಸರ್ವಸಮನಾಗಿವೆ. ಸತ್ಯ ಶುದ್ಧ ಕಾಯಕವನ್ನಾಚರಿಸುವ ಪ್ರತಿ ಶರಣನು ಸಾಕ್ಷಾತ್ ತನ್ನ ಆರಾಧ್ಯದೈವನಾದ ರಾಮೇಶ್ವರಲಿಂಗ ಎನ್ನುವುದು ಅಕ್ಕಮ್ಮನವರ ಅಭಿಪ್ರಾಯವಾಗಿದೆ.

**ಅಸಿ ಮಸಿ ಕೃಷಿ ವಾಣಿಜ್ಯ ಮುಂತಾದ ಕಾಯಕವ ಮಾಡಿ,**
**ಭಕ್ತರ ಪಡುಗ, ಪಾದತ್ರಾಣ,**
**ಪಹರಿ, ಬಾಗಿಲು, ಬೊಕ್ಕಸ,**
**ಬೀಯಗ ಮುಂತಾದ ಕಾಯಕವಂ ಮಾಡಿಕೊಂಡು**
**ವ್ರತಕ್ಕೆ ಊನವಿಲ್ಲದೆ ಮಾಡುವ ಕೃತ್ಯಕ್ಕೆ ಕಡೆಯಾಗದೆ**
**ಈ ಭಕ್ತನ ಅಂಗಳ ಅವಿಮುಕ್ತ ಕ್ಷೇತ್ರ,**
**ಆತನ ಮನೆಯೇ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಾಶ್ರಯ.**[5]

ಎಂದು ವಿವಿಧ ಕಾಯಕಗಳನ್ನು ಉಲ್ಲೇಖಿಸುವುದರ ಮೂಲಕ ನಿಷ್ಠೆಯಿಂದ ಕಾಯಕ ಮಾಡುವ ಭಕ್ತನ ಅಂಗಳವೇ ನಿಜವಾದ ಅವಿಮುಕ್ತ ಕ್ಷೇತ್ರ. ಆತನ ಮನೆಯೇ ದೈವದ ಆಶ್ರಯ ತಾಣವನ್ನಾಗಿಸಿ ತಾತ್ವಿಕತೆಯ ಮೂಲಕ ನೈತಿಕ ಮೌಲ್ಯಗಳನ್ನು ಬೋಧಿಸಿದ್ದಾರೆ.

**ಅರಸಿಗೆ ಆಚಾರ ಅನುಸರಣೆಯಾಯಿತ್ತೆಂದು,**
**ಸದಾಚಾರಿಗಳೆಲ್ಲಾ ಬನ್ನಿರಿಂದು,**
**ಕೂಲಿಗೆ ಹಾವ ಕಚ್ಚಿಸಿಕೊಂಡು ಸಾವ ತೆರನಂತೆ**[6]

ಎಂಬ ವಚನದಲ್ಲಿ ಭಕ್ತಿಯಲ್ಲಿ ಯಾವುದೇ ಲೌಕಿಕ ಲಾಭದ ಆಸೆಯನ್ನು ಹೊಂದಿರಬಾರದು. ಹಣಕ್ಕಾಗಿ ಧರ್ಮದ ನಿಯಮಗಳನ್ನು ಸಡಲಿಸಿದರೆ ವ್ರತದ ಗೌರವವನ್ನು ಹಾಳು ಮಾಡಿದಂತಾಗುತ್ತದೆ. ಭಕ್ತಿಯಲ್ಲಿ ವಂಚನೆಯ ಬುದ್ಧಿ ಇರಬಾರದು ಎಂದು ತಿಳಿಸಿದ್ದಾರೆ.

**ಅನ್ಯಶಬ್ದಕ್ಕೆ ಜಿಹ್ವಾಬಂಧನ, ದುರ್ಗಂಧಕ್ಕೆ ನಾಸಿಕಬಂಧನ,**
**ನಿಂದೆಗೆ ಕರ್ಣಬಂಧನ, ದೃಕ್ಕಿಂಗೆ ಕಾಮ್ಯಬಂಧನ,**
**ಚಿತ್ತಕ್ಕೆ ಆಶಾಬಂಧನ, ಅಂಗಕ್ಕೆ ಅಹಂಕಾರ ಬಂಧನ.**
**ಇಂತೀ ಷಡ್ಭಾವಬಂಧಂಗಳ ಹರಿದಲ್ಲದೆ**
**ಅರವತ್ತುನಾಲ್ಕು ಶೀಲಕ್ಕೆ ಸಂಬಂಧಿಯಲ್ಲ.**[7]

ಈ ವಚನವು ಶೀಲ ಮತ್ತು ಅಂತರಂಗ ಶುದ್ಧಿಯ ತತ್ವದ ಮೇಲೆ ನಿಂತಿದೆ. ಹಾಗೂ ಇಂದ್ರಿಯ ನಿಗ್ರಹಕ್ಕೆ ಆದ್ಯತೆಯನ್ನು ನೀಡಲಾಗಿದೆ. ಆರು ವಿಧದ ಬಂಧನಗಳ ಬಗ್ಗೆ ಉಲ್ಲೇಖಿಸಲಾಗಿದೆ. ಅವುಗಳೆಂದರೆ ಜಿಹ್ವಾಬಂಧನ, ನಾಸಿಕಬಂಧನ, ಕರ್ಣಬಂಧನ, ಕಾಮ್ಯಬಂಧನ, ಆಶಾಬಂಧನ, ಅಹಂಕಾರ ಬಂಧನ. ವಚನಕಾರರು ಆರು ವಿಧದ 'ಬಂಧನ'ಗಳ ಬಗ್ಗೆ ಮಾತನಾಡುತ್ತಾರೆ. ಇವು ಕೇವಲ ನಿಷೇಧಗಳಲ್ಲ, ಬದಲಿಗೆ ಇಂದ್ರಿಯಗಳನ್ನು ಜ್ಞಾನದ ಕಡೆಗೆ ತಿರುಗಿಸುವ ಪ್ರಕ್ರಿಯೆ. ಜಿಹ್ವೆ (ನಾಲಿಗೆ), ನಾಸಿಕ (ಮೂಗು), ಕರ್ಣ (ಕಿವಿ), ದೃಕ್ (ಕಣ್ಣು), ಚಿತ್ತ (ಮನಸ್ಸು) ಮತ್ತು ಅಂಗ (ದೇಹ)– ಇವು ಆಶೆ ಮತ್ತು ಅಹಂಕಾರಕ್ಕೆ ಸಿಲುಕಿದಾಗ ಮನುಷ್ಯ ಪಶುವಾಗುತ್ತಾನೆ. ಇವುಗಳನ್ನು ಗೆದ್ದಾಗ ಮಾತ್ರ 'ಅರಿವು' ಸಾಧ್ಯ ಎಂದು ತಿಳಿಸಲಾಗಿದೆ.

**ವೈಜ್ಞಾನಿಕ ಪ್ರಜ್ಞೆ:**

ಅನೇಕ ವಚನಕಾರರು ತಮ್ಮ ವಚನಗಳಲ್ಲಿ ವೈಜ್ಞಾನಿಕತೆಯ ಅಂಶಗಳನ್ನು ಸೇರಿಸಿದ್ದಾರೆ. ಹಾಗೆಯೇ ಅಕ್ಕಮ್ಮನವರ ವಚನಗಳಲ್ಲಿಯೂ ಸಹ ವೈಜ್ಞಾನಿಕ ಅಂಶಗಳು ಕಂಡುಬರುತ್ತವೆ. ಅಕ್ಕಮ್ಮನವರು ಆಹಾರ ಕ್ರಮವನ್ನು ಕುರಿತು ತಮ್ಮ ವಚನಗಳಲ್ಲಿ ಚರ್ಚಿಸಿದ್ದಾರೆ. ಬೆಳ್ಳಿ (ಬೆಳ್ಳುಳ್ಳಿ), ನುಗ್ಗಿ, ಉಳ್ಳೆ (ಈರುಳ್ಳಿ), ಭಂಗಿ ಈ ನಾಲ್ಕು ವಸ್ತುಗಳನ್ನು ತ್ಯಜಿಸಬೇಕೆಂದು ತಿಳಿಸಿದ್ದಾರೆ. ಆ ವಚನ ಇಂತಿದೆ;

**ಬೆಳ್ಳೆ, ಭಂಗಿ, ನುಗ್ಗಿ, ಉಳ್ಳೆ**
**ಮೊದಲಾದವನೆಲ್ಲವ ಬಿಡಬೇಕು.**
**ಬೆಳ್ಳೆಯಲ್ಲಿ ದೋಷ, ಭಂಗಿ ನುಗ್ಗಿಯಲ್ಲಿ ಲಹರಿ:**
**ಉಳ್ಳೆಯಲ್ಲಿ ದುರ್ಗುಣ, ವ್ರತ ಲಿಂಗಕ್ಕೆ ಸಲ್ಲವಾಗಿ**
**ಈ ನಾಲ್ಕು ಬಂದ ಬಂದಲ್ಲಿ ದೋಷವುಂಟು.**
**ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ**
**ವ್ರತಕ್ಕೆ ಅಹುದಲ್ಲ ಎಂಬುದನರಿಯಬೇಕು.**[8]

ಮನುಷ್ಯ ಸೇವಿಸುವ ಆಹಾರವು ಅವನ ಗುಣವನ್ನು ನಿರ್ಧರಿಸುತ್ತದೆ ಎನ್ನುವುದು ಇಲ್ಲಿನ ಸಾಮಾಜಿಕ ಆಶಯ. ಅಕ್ಕಮ್ಮನವರು ಬೆಳ್ಳೆಯಲ್ಲಿ ದೋಷ, ಉಳ್ಳೆಯಲ್ಲಿ ದುರ್ಗುಣ ಎನ್ನುವ ಮೂಲಕ ಸಾತ್ವಿಕ ಆಹಾರ ಪದ್ಧತಿಗೆ ಒತ್ತು ನೀಡಿದ್ದಾರೆ. ಅವರ ಪ್ರಕಾರ ಬೆಳ್ಳೆಯಲ್ಲಿ (ಬೆಳ್ಳುಳ್ಳಿ) ದೋಷವಿದೆ. ಉಳ್ಳೆ (ಈರುಳ್ಳಿ)ಯ ಸೇವನೆಯು ದುರ್ಗುಣಗಳನ್ನು ಹೆಚ್ಚಿಸುತ್ತದೆ. ಭಂಗಿ ಮತ್ತು ನುಗ್ಗೆ ಇವುಗಳಲ್ಲಿ ಲಹರಿಯಿದೆ. ಕ್ಷಣಿಕವಾದ ಅಮಲು ಮತ್ತು ಮೋಹ ಇವುಗಳಲ್ಲಿರುತ್ತದೆ. ಇವು ನರಮಂಡಲದ ಮೇಲೆ ಪ್ರಭಾವ ಬೀರಿ, ಸಾಧಕನ ಏಕಾಗ್ರತೆಯನ್ನು ಭಂಗಗೊಳಿಸುವ ವಸ್ತುಗಳಾಗಿವೆ. ಮನುಷ್ಯನನ್ನು ಜ್ಞಾನದ ಅರಿವಿನ ಮಾರ್ಗದಿಂದ ದೂರ ತಳ್ಳಿ, ಅಜ್ಞಾನದ ಅಮಲಿನಲ್ಲಿ ಮುಳುಗುವಂತೆ ಮಾಡುತ್ತವೆ ಎನ್ನುವುದು ಅಕ್ಕಮ್ಮನವರ ವೈಜ್ಞಾನಿಕ ಚಿಂತನೆಯಾಗಿದೆ.

ವಿಜ್ಞಾನದ ಪ್ರಕಾರ ಭಂಗಿ ಮೆದುಳಿನ ಡೊಪಮೈನ್ ಮಟ್ಟವನ್ನು

ಅಸಮತೋಲನಗೊಳಿಸುತ್ತದೆ. ಇದು ವ್ಯಸನಯುಕ್ತವಾದ ಮಾದಕ ವಸ್ತುವಾಗಿದೆ. ಇದು ಲಹರಿಯನ್ನು ಉಂಟುಮಾಡುವಂಥದ್ದು, ಅಂದರೆ ಮೆದುಳಿನ ನರ ಕೋಶವನ್ನು ತಾತ್ಕಾಲಿಕವಾಗಿ ಪ್ರಚೋದಿಸಿ ವ್ಯಕ್ತಿಗೆ ಭ್ರಮೆಯನ್ನು ಉಂಟುಮಾಡುತ್ತದೆ. ಇಂತಹ ಸಮಯದಲ್ಲಿ ವ್ಯಕ್ತಿಯು ಸರಿಯಾದ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯದಲ್ಲಿ ಕುಂಠಿತನಾಗುತ್ತಾನೆ.

ಈರುಳ್ಳಿ ಮತ್ತು ಬೆಳ್ಳುಳ್ಳಿ ರಾಜಸ ಮತ್ತು ತಾಮಸ ಆಹಾರಗಳೆಂದು ವರ್ಣಿಸಲಾಗಿದೆ. ವೈಜ್ಞಾನಿಕವಾಗಿ ಇವುಗಳಲ್ಲಿ ಅಲಿಸಿನ್ (Allicin) ಮತ್ತು ಗಂಧಕದ ಅಂಶ ಹೆಚ್ಚಿರುತ್ತದೆ. ಇದು ದೇಹದಲ್ಲಿ ಉಷ್ಣವನ್ನು ಹೆಚ್ಚಿಸಿ ನರಗಳನ್ನು ಅತಿಯಾಗಿ ಪ್ರಚೋದಿಸುತ್ತವೆ. ಇದರಿಂದ ಸಾಧಕನಲ್ಲಿ ಕೋಪ, ಲೈಂಗಿಕ ಪ್ರಚೋದನೆ, ಅಶಾಂತಿ ಉಂಟಾಗಬಹುದು. ಏಕಾಗ್ರತೆಯಿಂದ ಧ್ಯಾನದಲ್ಲಿ ತೊಡಗಿರುವ ಸಾಧಕನಿಗೆ ಇವು ಅಡ್ಡಿಯಾಗುತ್ತವೆ. ಆದ್ದರಿಂದ ಅಕ್ಕಮ್ಮನವರು ಈ ನಾಲ್ಕು ಆಹಾರ ಪದಾರ್ಥಗಳನ್ನು ತ್ಯಜಿಸಬೇಕೆಂದು ತಿಳಿಸಿದ್ದಾರೆ.

ತಮ್ಮ ಮತ್ತೊಂದು ವಚನದಲ್ಲಿ ಸೋದರತ್ತೆಯ ಮಗಳನ್ನು ಮದುವೆಯಾಗುವ ಪದ್ಧತಿಯನ್ನು ಅವರು ನೈತಿಕವಾಗಿ ಮತ್ತು ತಾರ್ಕಿಕವಾಗಿ ಪ್ರಶ್ನೆ ಮಾಡಿದ್ದಾರೆ.

**ತಂದೆಯ ಒಂದಾಗಿ ಬಂದ**
**ಸಹೋದರ ಗಂಡಲ್ಲ ತಂದೆಯಾದ ಕಾರಣ,**
**ಆ ತಂದೆಯ ಒಡಹುಟ್ಟಿದ ಹೆಣ್ಣೆಲ್ಲ ತನಗೆ ತಾಯಲ್ಲವೆ?**
**ಆಕೆಯನತ್ತೆಯೆಂಬ ಜಗದ ತೆತ್ತುಮತ್ತರ ನಾವರಿಯೆವಯ್ಯಾ.**
**ಮತ್ತೆ, ತಾವು ಬಳಸುವುದಕ್ಕೆ ಗೊತ್ತಿಲ್ಲವೆಂದಾಕೆಯ ಮಗಳನು**
**ಸತಿಯನೆ ಮಾಡಿಕೊಳ್ಳಬಹುದೆ?**
**ಹೆತ್ತತಾಯ ಮಗಳ ಮಗಳು ಒಡಹುಟ್ಟಿದವಳಲ್ಲವೆ?**
**ಸೊಸೆ ಮಾವನೆಂದು ಸತಿಯಂ ಮಾಡಿಕೊಂಬರು ನೋಡಾ.**
**ಸೊಸೆಗೂ ಮಾವಂಗೂ ಸಂಸರ್ಗ ನಿಲ್ಲುವುದೆ?**[9]

ಅಕ್ಕಮ್ಮನವರ ದೃಷ್ಟಿಯಲ್ಲಿ ತಂದೆಯ ತಂಗಿ ತಾಯಿಸಮಾನಳಾಗುತ್ತಾಳೆ. ಅವಳ ಮಗಳು ತಂಗಿ ಎಂಬ ಹೊಸತರ್ಕದ ಮೂಲಕ ರಕ್ತ ಸಂಬಂಧದ ಶುದ್ಧತೆಯನ್ನು ಕಾಪಾಡಲು ಕರೆ ನೀಡಿದ್ದಾರೆ. ಇಲ್ಲಿ ಹತ್ತಿರದ ರಕ್ತಸಂಬಂಧದ ವಿವಾಹ ಸಂಬಂಧ ಕುರಿತು ಮಾತನಾಡಿದ್ದಾರೆ. ಹತ್ತಿರದ ರಕ್ತ ಸಂಬಂಧಿಗಳ ನಡುವಿನ ವಿವಾಹದಿಂದ ಉಂಟಾಗುವ ಅನುವಂಶಿಕ ದೋಷಗಳ ಬಗ್ಗೆ ಆಧುನಿಕ ವಿಜ್ಞಾನ ಎಚ್ಚರಿಸುತ್ತದೆ. ಇದು ಸಾಮಾಜಿಕ ಜೀವವಿಜ್ಞಾನದ ಒಂದು ಮೌಲ್ಯವಾಗಿದೆ. ಇದನ್ನೇ 12ನೇ ಶತಮಾನದಲ್ಲಿಯೇ ಅಕ್ಕಮ್ಮನವರು ಆಲೋಚಿಸಿರುವುದು ಕಂಡುಬರುತ್ತದೆ.

ಒಟ್ಟಾರೆ ಅಕ್ಕಮ್ಮನವರ ಕೆಲವು ವಚನಗಳು ಕೇವಲ ಧಾರ್ಮಿಕ ಚೌಕಟ್ಟಿಗೆ ಸೀಮಿತವಾಗಿಲ್ಲ. ವ್ರತಾಚಾರ–ಶೀಲ–ನೇಮ, ಕಾಯಕ–ದಾಸೋಹ ಸಿದ್ಧಾಂತಗಳ ಮೂಲಕ ತಾತ್ವಿಕ ಮೌಲ್ಯವನ್ನು ಪ್ರಸರಿಸಿದ್ದಾರೆ. ಪರಿಸರ ಪ್ರಜ್ಞೆ, ಮಾನವಿಕ ವಿಜ್ಞಾನ,

ಆರೋಗ್ಯ ವಿಜ್ಞಾನ ಮತ್ತು ಮನೋವಿಜ್ಞಾನದ ಎಳೆಗಳು ಇವರ ವಚನಗಳಲ್ಲಿ ಅಡಕವಾಗಿವೆ. ಮೌಢ್ಯವನ್ನು ತೊರೆದು ಸತ್ಯದ ಅನ್ವೇಷಣೆ ಮಾಡುವುದೇ ಅವರ ವಚನಗಳ ಪರಮೋಚ್ಚ ವೈಜ್ಞಾನಿಕ ಮೌಲ್ಯವಾಗಿದೆ. ಅಕ್ಕಮ್ಮನವರು ತಮ್ಮ ಬಹುತೇಕ ವಚನಗಳಲ್ಲಿ ಸ್ವಸ್ಥ ದೇಹ ಮತ್ತು ಸ್ವಸ್ಥ ಮನಸ್ಸಿನ ಬಗ್ಗೆ ಮಾತನಾಡಿದ್ದಾರೆ. ಪಂಚಾಚಾರದ ಆಚರಣೆಯು ಸ್ವಸ್ಥ ಆರೋಗ್ಯವನ್ನು ವೃದ್ಧಿಸುತ್ತದೆ ಎಂದು ಅವರು ವಚನಗಳ ಮೂಲಕ ತಿಳಿಸುವ ಪ್ರಯತ್ನ ಮಾಡಿದ್ದಾರೆ. ಇವರ ವಚನಗಳು ತಾತ್ವಿಕವಾಗಿ ಮತ್ತು ವೈಜ್ಞಾನಿಕ ದೃಷ್ಟಿಕೋನದಲ್ಲಿ ಉತ್ಕೃಷ್ಟತೆಯನ್ನು ಹೊಂದಿವೆ.

## ಕೊನೆ ಟಿಪ್ಪಣಿಗಳು:

1. ವೀರಣ್ಣ ರಾಜೂರ, (2021), ಶಿವಶರಣೆಯರ ವಚನ ಸಂಪುಟ (ಸಮಗ್ರ ವಚನ ಸಂಪುಟ 5), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ, ವಚನ. 478, ಪು.ಸಂ. 176
2. ಅದೇ, ವಚನ. 433, ಪು.ಸಂ. 155
3. ಅದೇ, ವಚನ. 560, ಪು.ಸಂ. 214
4. ಅದೇ, ವಚನ. 518, ಪು.ಸಂ. 194
5. ಅದೇ, ವಚನ. 442, ಪು.ಸಂ. 159
6. ಅದೇ, ವಚನ. 440, ಪು.ಸಂ. 158
7. ಅದೇ, ವಚನ. 439. ಪು.ಸಂ. 158
8. ಅದೇ, ವಚನ. 526, ಪು.ಸಂ. 198
9. ಅದೇ, ವಚನ. 486, ಪು.ಸಂ. 180

## ಪರಾಮರ್ಶನ ಗ್ರಂಥಗಳು:


1. ವೀರಣ್ಣ ರಾಜೂರ, (2021), ಶಿವಶರಣೆಯರ ವಚನ ಸಂಪುಟ (ಸಮಗ್ರ ವಚನ ಸಂಪುಟ 5), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.
2. ಪುಷ್ಪ ಎಚ್.ಎಲ್., (2004), ಅಕ್ಕಮ್ಮ, ಮೈಸೂರು: ಶ್ರೀ ಬಸವ ಅಧ್ಯಯನ ಪೀಠ, ಮೈಸೂರು ವಿಶ್ವವಿದ್ಯಾಲಯ.
3. ಶಿವಕುಮಾರ ಎಸ್. ಬಳಿಗಾರ, (2021), ವಚನ ಚಿಂತನ ವಿಭಿನ್ನ ನೆಲೆಗಳು, ಧಾರವಾಡ: ಶ್ರೀ ಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ.
4. ಕಾವ್ಯಶ್ರೀ ಜಿ., (2015), ವಚನಕಾರ್ತಿಯರು ಮತ್ತು ವೈಚಾರಿಕ ಪ್ರಜ್ಞೆ, ಚಿತ್ರದುರ್ಗ: ಆದಿತ್ಯ ಪ್ರಕಾಶನ.